# ಎಲ್ಲರಿಗೂ ಶಿಕ್ಷಣ | ಒಂದು ಸಂಭವನೀಯ ಸುಂದರ ಚಿತ್ರಣ

**ಅನಂತ್ ಗಂಗೋಲ**

‘ಎಲ್ಲರಿಗೂ ಶಿಕ್ಷಣ’ (Education for All) ಎಂಬ ಪರಿಕಲ್ಪನೆಯು ಒಳಗೊಳ್ಳುವಿಕೆಯ ಸಮಾಜದ ಅಡಿಪಾಯ. ಆದರೆ ಅಸ್ತಿತ್ವದಲ್ಲಿರುವ ಶಿಕ್ಷಣ ವ್ಯವಸ್ಥೆ ಮತ್ತು ಚಿಂತನೆಗಳನ್ನು ವಿಸ್ತರಿಸುವುದರಿಂದಷ್ಟೇ ಇದನ್ನು ಸಾಧಿಸಲು ಸಾಧ್ಯವಿಲ್ಲ. ಆಲೋಚನೆಯಲ್ಲಿ ಕ್ರಿಯಾತ್ಮಕ ಬದಲಾವಣೆ ಅಗತ್ಯ. ಆದ್ದರಿಂದಲೇ ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣ ವ್ಯವಸ್ಥೆಯ ನಂಬಿಕೆ, ಸಿದ್ಧಾಂತ, ಆಚರಣೆ ಮತ್ತು ಸಂಪನ್ಮೂಲಗಳ ಬಗ್ಗೆ ಯೋಚಿಸುವುದು ಮತ್ತು ಈ ಶಿಕ್ಷಣ ವ್ಯವಸ್ಥೆ ಸೂಕ್ತವಾಗಿದೆಯೇ ಅಥವಾ ಮೂಲಭೂತ ಬದಲಾವಣೆಗಳ ಅವಶ್ಯಕತೆ ಇದೆಯೇ ಎಂದು ನಿರ್ಣಯಿಸುವುದು ಅಗತ್ಯ.

**ಒಂದು ಕನಸಿನ ಪಯಣ**

ಒಬ್ಬ ವ್ಯಕ್ತಿಯ ಮತ್ತು ದೇಶದ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ಅಪಾರವಾದ್ದರಿಂದ ಪ್ರತಿಯೊಬ್ಬನೂ ಶಿಕ್ಷಣ ಪಡೆಯಲೇಬೇಕೆಂಬ ಸರಳ ಉದ್ದೇಶವುಳ್ಳ ‘ಎಲ್ಲರಿಗೂ ಶಿಕ್ಷಣ’ ಎಂಬ ಪರಿಕಲ್ಪನೆಯು ಒಂದು ಸುಂದರ ಕನಸು, ಅನುಸರಣೆಗೆ ಇದೊಂದು ಉದಾತ್ತ ಆದರ್ಶವಾದರೂ ಅನಕ್ಷರತೆಯಿಂದ ಸಾಕ್ಷರತೆಯೆಡೆಗೆ ಸಮಾಜದಲ್ಲಿ ಬದಲಾವಣೆ ತರಲು ಇದು ಅತ್ಯಮೂಲ್ಯ ಸಾಧನ. ಪ್ರತ್ಯೇಕತೆಯಿಂದ ಒಳಗೊಳ್ಳುವಿಕೆಯತ್ತ, ಅಸಮಾನತೆಯಿಂದ ಸಮಾನತೆಯತ್ತ, ಅನ್ಯಾಯದಿಂದ ನ್ಯಾಯದತ್ತ ಮತ್ತು ಸಂಘರ್ಷದಿಂದ ಶಾಂತಿಯತ್ತ ಸಮಾಜದ ಪರಿವರ್ತನೆಗೆ ಶಿಕ್ಷಣ ಒಂದು ವಾಹಕವಾಗಬಲ್ಲುದು. ಹಾಗಾಗಿ ಪರಿಣಾಮ ಮತ್ತು ಅನುಷ್ಠಾನಗಳ ವಿವಿಧ ನಿರೀಕ್ಷೆಗಳನ್ನು ಒಳಗೊಂಡ ಬಹು ಆಯಾಮವುಳ್ಳ ಕನಸು ಇದು. ಆರಂಭದಲ್ಲಿ ಶ್ರೇಣೀಕೃತ ಸಮಾಜದಲ್ಲಿ ಶಿಕ್ಷಣ ಕೇವಲ ಮೇಲ್ವರ್ಗಕ್ಕೆ ಮಾತ್ರ ಸೀಮಿತವೆಂಬ ನಿರ್ಬಂಧದ ಜೊತೆಗೆ, ಕಲಿಕೆಯ ತೆಕ್ಕೆಗೆ ಎಲ್ಲರನ್ನೂ ಒಳಗೊಳಿಸುವ ಇಚ್ಛಾಶಕ್ತಿಯ ಕೊರತೆಯೂ ಇತ್ತು. ಸೂಕ್ತ ಚಿಂತನಾಕ್ರಮ, ಸಂಘಟಿತ ಸಾಮಾಜಿಕ ಪ್ರಜ್ಞೆ ಮತ್ತು ಮೂಲಸೌಕರ್ಯಗಳ ಕೊರತೆ ಅಥವಾ ಇವೆಲ್ಲದರ ಒಟ್ಟು ಪರಿಣಾಮದಿಂದಲೂ ಉದ್ದೇಶಿತ ಬದಲಾವಣೆ ತರುವಲ್ಲಿ ವಿಫಲರಾಗಿರಬಹುದು.

ಸ್ವಾತಂತ್ರ್ಯಾ ನಂತರದ ಮೊದಲ ಐದು ದಶಕಗಳಲ್ಲಿ ಶಿಕ್ಷಣ ಬಹುಸಂಖ್ಯಾತರನ್ನು ತಲುಪಲಿಲ್ಲ. ಈ ದೂರ ಉಳಿಯುವಿಕೆಯು ಶಾಲಾ ಕಟ್ಟಡಕ್ಕಿದ್ದ ಭೌತಿಕ ಅಂತರ ಮಾತ್ರವಾಗಿರದೆ, ಒಳಗೊಳ್ಳುವ ಸಮಾಜದತ್ತ ಮೂಲ ಮೆಟ್ಟಿಲಾಗಬಲ್ಲ ಶಿಕ್ಷಣದ ಶಕ್ತಿಯನ್ನು ನಿರ್ಲಕ್ಷಿಸಿದ ಶಿಕ್ಷಣದ ಮೇಲಿನ ನಂಬಿಕೆ ಮತ್ತು ಶೈಕ್ಷಣಿಕ ಆದ್ಯತೆಯ ಕೊರತೆಯೂ ಆಗಿತ್ತು. ಯಾಕೆಂದರೆ ಅದು ಒಂದು ಒಳಗೊಳ್ಳುವ ಸಮಾಜಕ್ಕೆ ಮೂಲಭೂತ ಪ್ರವೇಶಿಕೆಯಾಗುವ ಪ್ರಭಾವವನ್ನು ಕಡೆಗಣಿಸಿತು. ಬಹಳಷ್ಟು ಪ್ರದೇಶಗಳಲ್ಲಿ ಶಾಲೆಗಳೇ ಇರಲಿಲ್ಲ, ಶಾಲೆ ಮತ್ತು ಮಕ್ಕಳು ಎರಡೂ ಇರುವ ಕಡೆ ಎಲ್ಲರನ್ನೂ ಒಳಗೊಳ್ಳುವ ದೃಢ ನಿಶ್ಚಯ ಇರಲಿಲ್ಲ.

14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ (Universal Elementary Education-UEE)ವನ್ನು ಸಂವಿಧಾನವೇ ನಿರ್ದೇಶಿಸಿದೆ. ಅನಂತರದ ಪಂಚವಾರ್ಷಿಕ ಯೋಜನೆಗಳಲ್ಲೂ ಈ ಗುರಿಯೆಡೆಗೆ ಲಕ್ಷ್ಯ ಹರಿಸಲಾಗಿದೆ. ಆದರೆ ಬಾಣಗಳು ಗುರಿ ತಲುಪುವ ಮೊದಲೇ ಬಿದ್ದು ಹೋದವು: ರಾಧಾಕೃಷ್ಣನ್ ಆಯೋಗ (1948–49) ಮತ್ತು ಮುದಲಿಯಾರ್ ಆಯೋಗ (1952–53)ಗಳು ಕ್ರಮವಾಗಿ ವಿಶ್ವವಿದ್ಯಾನಿಲಯ ಮತ್ತು ಪ್ರೌಢ ಶಿಕ್ಷಣದ ಮೇಲಷ್ಟೇ ಗಮನ ಕೇಂದ್ರೀಕರಿಸಿದವು. ನಂತರ ಬಂದ ಕೊಠಾರಿ ಆಯೋಗ (1964–66) ಮಾತ್ರ ಪ್ರಾಥಮಿಕ ಶಿಕ್ಷಣವನ್ನೂ ಒಳಗೊಳ್ಳುವಂತೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಆದರೆ ಶಿಕ್ಷಣದ ಸಾರ್ವತ್ರಿಕತೆ ಎಂಬುವುದು ಇನ್ನೂ ಹಾರೈಕೆಯಾಗಿ ಅಷ್ಟೇ ಉಳಿದಿತ್ತು.

**ಒಂದು ಸುಗಮ ಹಾದಿ**

ನಂತರದಲ್ಲಿ ‘ಎಲ್ಲರಿಗೂ ಶಿಕ್ಷಣ’ ವಿಷಯದ ಮೇಲೆ ನಡೆದ ವಿಶ್ವ ಅಧಿವೇಶನ (World Conference on Education for All) (ಇಎಫ್‌ಎ, ಜಾಮಿಯನ್, ಥಾಯ್ಲೆಂಡ್, ಮಾರ್ಚ್ 1990) ಮತ್ತು ವಿಶ್ವ ಶಿಕ್ಷಣ ವೇದಿಕೆ (World Education Forum) ಯಿಂದಾಗಿ (ಡಕರ್, ಸೆನೆಗಲ್, ಏಪ್ರಿಲ್ 2000) ಭಾರತದೆಡೆಗೆ ಅಂತರರಾಷ್ಟ್ರೀಯ ಗಮನವು ಹರಿದು, ಖಾಸಗಿ, ಸರ್ಕಾರಿ ಜಂಟಿ ಸಹಭಾಗಿತ್ವ ಮತ್ತು ಬಾಹ್ಯ ಹೂಡಿಕೆಗಳು ಆರಂಭಗೊಂಡವು. 1994ರಲ್ಲಿ ಸರಕಾರದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (The Government's District Primary Education Programme - DPEP) ಚಾಲನೆಗೆ ಬಂದಿತು. 2000ನೇ ವರ್ಷದಲ್ಲಿ ಮಹತ್ವದ ಸರ್ವ ಶಿಕ್ಷಣ ಅಭಿಯಾನ (Sarva Shiksha Abhiyan- SSA) ರೂಪುತಾಳಿತು. ಇದನ್ನು ಅನುಸರಿಸಿ 2009ರಲ್ಲಿ ‘ಕಡ್ಡಾಯ ಶಿಕ್ಷಣದ ಹಕ್ಕು’ ಕಾಯ್ದೆ (Right to Education Act) ಜಾರಿಗೆ ಬಂದಿತು.

ಕಳೆದ ಮೂರು ದಶಕಗಳಲ್ಲಿ ಪ್ರಾಥಮಿಕ ಹಂತದಲ್ಲಿ ಶಾಲೆಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಆಗಿದೆ. ಆ ಮೂಲಕ ಔಪಚಾರಿಕ ಶಿಕ್ಷಣದ ವ್ಯಾಪ್ತಿಯಿಂದ ಚಾರಿತ್ರಿಕವಾಗಿ ಹೊರಗೇ ಉಳಿದಿದ್ದ ಹಲವು ಸಮುದಾಯಗಳು ಔಪಚಾರಿಕ ಶಿಕ್ಷಣದ ತೆಕ್ಕೆಗೆ ಸೇರಿಕೊಂಡವು. ಅತ್ಯಂತ ದೂರ ಪ್ರದೇಶಗಳಲ್ಲಿ ಅಥವಾ ಸಂಕಷ್ಟದಲ್ಲಿ ಬದುಕುತ್ತಿದ್ದ, ಎಲ್ಲಾ ರೀತಿಯ ಸವಲತ್ತುಗಳಿಂದ ವಂಚಿತರಾದ ಬುಡಕಟ್ಟು ಮತ್ತು ದಲಿತ ಸಮುದಾಯಗಳು, ಅದರಲ್ಲೂ ಗಮನಾರ್ಹ ಸಂಖ್ಯೆಯ ಹೆಣ್ಣುಮಕ್ಕಳನ್ನು ಇದು ಒಳಗೊಂಡಿತು. ಈ ಎಲ್ಲಾ ಆರಂಭಿಕ ಕೆಲಸಗಳು ಪೋಷಕರಲ್ಲಿ ಭರವಸೆ ಮತ್ತು ಮಹತ್ವಾಕಾಂಕ್ಷೆ ಮೂಡಲು ಕಾರಣವಾಯಿತು. ಯಾಕೆಂದರೆ ಈ ಹಂತದಲ್ಲಿ ಶಾಲೆಗೆ ಸೇರಿದ ಬಹಳಷ್ಟು ಮಕ್ಕಳು ಶಾಲೆಯ ಮುಖ ಕಂಡವರಲ್ಲ ಅಥವಾ ಪ್ರಾಥಮಿಕ ತರಗತಿಗಳಿಂದಾಚೆಗೆ ಶಿಕ್ಷಣ ಪಡೆಯಲು ಸಾಧ್ಯ ಇದ್ದವರಲ್ಲ.

**ಎಲ್ಲರಿಗೂ ಶಿಕ್ಷಣ: ಒಂದು ದಾರಿದೀಪ**

೯೦ರ ದಶಕದಲ್ಲಿ ಆರಂಭವಾದ ಡಿಪಿಇಪಿಯು ಸಾಧನೆ

ಅಸಾಧಾರಣವಾದದ್ದು. ಇಂದಿಗೂ ಹತಾಶೆ, ದುಃಖ, ಅಸಮಾನತೆ ಮತ್ತು ಬಡತನಗಳನ್ನೇ ಹೊದ್ದುಕೊಂಡಿದ್ದವರಿಗೆ ಸಮಾನ ಅವಕಾಶಗಳು, ಉತ್ಸಾಹ, ವಿಶ್ವಾಸ, ವಿಚಾರ ಮತ್ತು ಜ್ಞಾನವನ್ನು ಕಟ್ಟಿಕೊಡುವುದರ ಮೂಲಕ 'ಎಲ್ಲರಿಗೂ ಶಿಕ್ಷಣ'ವು ಸಮಾಜದ ಪರಿವರ್ತನೆಗೆ ಕಾರಣವಾಗಿದೆ. ಇಂದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಗಳನ್ನೂ ಮೀರಿ ಬಹಳಷ್ಟು ಸಮುದಾಯಗಳ ಮಕ್ಕಳು, ಮತ್ತವರ ಪೋಷಕರು ಶಿಕ್ಷಣದ ಲಾಭ ಪಡೆಯುತ್ತಿದ್ದಾರೆ. ಭಾರತಕ್ಕೆ ವಿದ್ಯಾರ್ಥಿವೇತನವೆಂಬ ಪರಿಕಲ್ಪನೆ ಹೊಸತಲ್ಲವಾದರೂ, 'ಎಲ್ಲರಿಗೂ ಶಿಕ್ಷಣ'ವೆಂಬ ಪರಿಕಲ್ಪನೆ ಮಾತ್ರ ಹೆಚ್ಚುಕಡಿಮೆ ಹೊಸತು. ಆ ಮೂಲಕ, ಸಾಮಾಜಿಕ ಪರಿವರ್ತನೆಗಾಗಿ ಒಂದು ಮೌನ ಚಿಂತನ-ಮಂಥನ ನಡೆಯುವಂತಾಯಿತು. ಬಹುಕಾಲದಿಂದ ಕಾಪಿಟ್ಟುಕೊಂಡು ಬಂದ ಕನಸಿನ ಸಾಕಾರಕ್ಕೆ ಇದೊಂದು ಅವಕಾಶವಾಯಿತು.

**ಕಾಳಜಿಗಳು: ಅಡೆತಡೆಗಳು**

ಇಂದಿನ ಕಾರ್ಯವಿಧಾನ ಒಳಗೊಳ್ಳುವಿಕೆಯೆಡೆಗೆ ಇದ್ದಾಗಲೂ ನಾವು ನಮ್ಮನ್ನೇ ಕೇಳಿಕೊಳ್ಳಬೇಕು: ಎಲ್ಲರಿಗೂ ಶಿಕ್ಷಣವೆಂಬ ಇಂಥ ವಿಸ್ತೃತ ಚಿಂತನೆಯ ಮೂಲಕ ಒಳಗೊಳ್ಳುವಿಕೆಯ ಸಮಾಜವನ್ನು ನೋಡಲು, ಒಪ್ಪಿಕೊಳ್ಳಲು ಮತ್ತು ಆ ನಿಟ್ಟಿನಲ್ಲಿ ಕಾರ್ಯ-ಪ್ರವೃತ್ತರಾಗಲು ನಾವು ಸಿದ್ಧರಿದ್ದೇವೆಯೇ? ನಾವೆಲ್ಲರೂ ಒಟ್ಟಾಗಿ ಹೆಚ್ಚು ನ್ಯಾಯಸಮ್ಮತ ಮತ್ತು ಸಮಾನತೆಯ ಜಗತ್ತನ್ನು ಬಯಸುತ್ತೇವೆಯೇ?

ಈ ಎರಡೂ ಪ್ರಶ್ನೆಗಳಿಗೂ ಉತ್ತರ 'ಇಲ್ಲ' ಎಂದೇ ಆಗಿದೆ. 1990ರ ಜಾಮಿಯನ್ ಅಧಿವೇಶನ (The Jomtien Conference-1990) ಮತ್ತು ಆ ಬಳಿಕ ನಡೆದ 1997ರ ಡಕರ್ ಘೋಷಣೆ (Dakar Declaration), ಒಂದು ತುರ್ತು ಕರಾರು ರೂಪಿಸಿ, ಆ ಮೂಲಕ 'ಎಲ್ಲರಿಗೂ ಶಿಕ್ಷಣದ' ಕಡೆಗೆ ಸಾಗಲು ಶಕ್ಯವಾಗುವಂತೆ ದೇಶಗಳಿಗೆ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿತು. ಇದರ ಪರಿಣಾಮವಾಗಿ ಸರ್ವ ಶಿಕ್ಷಣ ಅಭಿಯಾನ (SSA) ಎಂಬ ಮಹತ್ವದ ಯೋಜನೆಯು ಆರಂಭವಾಯಿತು. ಹೊಸ ಶಾಲೆಗಳು ಪ್ರಾರಂಭವಾದವು, ಹೊಸ ವಿದ್ಯಾರ್ಥಿಗಳು ದಾಖಲಾದರು ಮತ್ತು ಹೊಸ ಶಿಕ್ಷಕರು ನೇಮಕಗೊಂಡರು.

ಆದರೆ ಶಿಕ್ಷಕರನ್ನು ಸಜ್ಜುಗೊಳಿಸಲು ಮತ್ತು ಶೈಕ್ಷಣಿಕ ಬೆಂಬಲ ನೀಡುವ ಹೊಸ ವ್ಯವಸ್ಥೆಯನ್ನು ರೂಪಿಸುವ, ಅಭಿವೃದ್ಧಿಪಡಿಸುವ ಮಹತ್ವದ ವಿಚಾರವೇ ಬಹುಕಾಲದವರೆಗೆ ಈಡೇರಲೇ ಇಲ್ಲ. ಇದರ ಪರಿಣಾಮವಾಗಿ ಸಿದ್ಧತೆ ಇಲ್ಲದ/ತರಬೇತಿ ಇಲ್ಲದ ಶಿಕ್ಷಕರು ಶಾಲೆಗಳಿಗೆ ನೇಮಕಗೊಳ್ಳುವುದರ ಜೊತೆಗೆ ಅಸಮರ್ಪಕ ಅಥವಾ ಶೈಕ್ಷಣಿಕ ಬೆಂಬಲ ವ್ಯವಸ್ಥೆಯೇ ಇಲ್ಲದ ಪರಿಸ್ಥಿತಿ ಉಂಟಾಯಿತು. ಶಾಲೆಗಳಿಗೆ ಭಾರೀ ಪ್ರಮಾಣದಲ್ಲಿ ವಿದ್ಯಾರ್ಥಿ ಸಮೂಹ ಹರಿದು-ಬಂದಾಗ, ಅದರಲ್ಲೂ ಬಹುತೇಕರು ಮೊದಲ ತಲೆಮಾರಿನ ಕಲಿಕಾರ್ಥಿ ಕುಟುಂಬದವರಾಗಿದ್ದುದರಿಂದ ಅವರನ್ನು ಹೇಗೆ ನಿರ್ವಹಿಸುವುದು ಎಂಬ ತಿಳುವಳಿಕೆಯ ಕೊರತೆ ಕಂಡುಬಂದಿತು. ಆ ಮಕ್ಕಳಿಗೆ ಶಾಲೆಯ ಭಾಷೆ ಮತ್ತು ಸಂಸ್ಕೃತಿಯನ್ನು ಅರ್ಥ-ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಮತ್ತು ಶಿಕ್ಷಕರಿಗೂ ಈ ವಿಶಾಲ ಸಮೂಹದ ಮಕ್ಕಳ ಭಾಷೆ ಮತ್ತು ಅವರ ಸಮ್ಮಿಶ್ರ ಸಂಸ್ಕೃತಿಯೊಂದಿಗೆ ವ್ಯವಹರಿಸುವುದು ಕಷ್ಟಸಾಧ್ಯವಾಯಿತು. ದೇಶದ ಅತ್ಯಂತ ದೂರಪ್ರದೇಶಗಳ ಸರಕಾರಿ ಶಾಲೆಗಳಿಗೆ ನೇಮಕವಾದ ಬಹುತೇಕ ಶಿಕ್ಷಕರಿಗೆ ತಮ್ಮದಲ್ಲದ ಸಮುದಾಯಗಳ ಜೊತೆ ವಾಸಿಸುವ ಅಥವಾ ಅಂತಹ ಶಾಲೆಗಳಿಗೆ ಪ್ರಯಾಣಿಸುವ ಸವಾಲು ಎದುರಾಯಿತು. ತರಬೇತಿ ಇಲ್ಲದ ಮತ್ತು ಕಡಿಮೆ ವೇತನ ಪಡೆಯುವ ಶಿಕ್ಷಕರು ಅತ್ಯವಶ್ಯಕತೆಯಿದ್ದ ಮತ್ತು ಅತ್ಯಂತ ಅನನುಕೂಲತೆಗಳಿದ್ದ ಮಕ್ಕಳಿಗೆ ಶಿಕ್ಷಣವನ್ನು ನಿರ್ವಹಿಸು-ವಂತಾಯಿತು. ಎಲ್ಲಾ ವಿಚಾರಗಳನ್ನು ಸಮರ್ಪಕವಾಗಿ ಅರ್ಥೈಸಿಕೊಳ್ಳದ ಪರಿಣಾಮವಾಗಿ ಕಳಪೆ ನಿರ್ವಹಣೆಯ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ, ಕಲಿಕೆಯೇ ಇಲ್ಲದ ಮಕ್ಕಳು, ಸಂಬಂಧ ಕಳಚಿದ ಸಮುದಾಯಗಳು ಮತ್ತು ಸ್ಥೈರ್ಯಗುಂದಿದ ಶಿಕ್ಷಕರು ರೂಪುಗೊಂಡರು.

**ಮೌಲ್ಯಮಾಪನದ ಸಮಯ**

ಇದನ್ನ ಪರಿಹರಿಸುವುದು ಹೇಗೆ? ಈಗ ಚಾಲ್ತಿಯಲ್ಲಿರುವ ತಿಳುವಳಿಕೆ, ಕಾಳಜಿ, ಸಂರಚನೆ, ಮನೋಭಾವ ಮತ್ತು ಕಾರ್ಯತಂತ್ರಗಳಿಂದ 'ಎಲ್ಲರಿಗೂ ಶಿಕ್ಷಣ'ದ ಗುರಿಯನ್ನು ಸಾಧಿಸಲು ಸಾಧ್ಯವಿದೆಯೆ? ಅಥವಾ ಈ ಗುರಿ ಸಾಧನೆಗೆ ಹೊಸ ಬಗೆಯ ತಿಳುವಳಿಕೆ, ಹೊಸ ಕಾಳಜಿ ಮತ್ತು ಮನೋಭಾವ, ಜೊತೆಗೆ ಹೊಸ ಕಾರ್ಯತಂತ್ರ, ಸಂರಚನೆ ಮತ್ತು ಮಾನದಂಡಗಳ ಅಗತ್ಯವಿದೆಯೇ?

**ದೊಡ್ಡ ಬದಲಾವಣೆ ಎಂದರೆ ಹಲವು ಪುಟ್ಟ ಬದಲಾವಣೆಗಳು**

ಮೊದಲ ಬದಲಾವಣೆ ಎಂದರೆ ಶಾಲೆಗೆ ದಾಖಲಾಗದೆ ಇರುವ ವಿವಿಧ ಅಂಗ, ಸಮುದಾಯಗಳ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸುವುದು, ಅದೇ ವೇಳೆಗೆ ಅನುಕೂಲಸ್ಥರ ಮಕ್ಕಳು ಖಾಸಗಿ ಶಾಲೆಗಳಿಗೆ ಬದಲಾಯಿಸಿಕೊಂಡು, ಅಂತರ ಕಾಯ್ದುಕೊಂಡದ್ದು. ಇದರ ಪರಿಣಾಮವಾಗಿ ಸರಕಾರಿ ಶಾಲೆಗಳು ಬೇರೆ ಆಯ್ಕೆಗಳೇ ಇಲ್ಲದಿರುವ ಅತ್ಯಂತ ಬಡತನದ ಹಿನ್ನೆಲೆಯ ಮಕ್ಕಳ ಶಾಲೆಗಳೆನಿಸಿದವು.

ಸರ್ಕಾರೇತರ ಸಂಸ್ಥೆ(ಎನ್‌ಜಿಒ)ಗಳಿಗೆ ಸರ್ಕಾರಿ ಶಿಕ್ಷಣ ವ್ಯವಸ್ಥೆಯೊಂದಿಗೆ ತೊಡಗಿಕೊಳ್ಳುವ ಅವಕಾಶ ಸೃಷ್ಟಿಯಾಗಿದ್ದು ಎರಡನೆಯ ಬದಲಾವಣೆ. ಎನ್‌ಜಿಒಗಳು ಶಾಲೆಗಳಲ್ಲಿ ಮತ್ತು ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಇಲಾಖೆಯೊಂದಿಗೆ ವಿವಿಧ ಪಾತ್ರಗಳನ್ನು ನಿರ್ವಹಿಸುವುದಕ್ಕೆ ಪ್ರಾರಂಭಿಸಿದವು. ಟೀಚ್ ಫಾರ್ ಇಂಡಿಯಾ (ಟಿಎಫ್ಐ), ಕೈವಲ್ಯ ಎಜುಕೇಷನ್ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್ ಮತ್ತು ಇನ್ನೂ ಹಲವು ಸಂಸ್ಥೆಗಳ ಕೊಡುಗೆಗಳು ತಳಮಟ್ಟದಲ್ಲಿ ಪರಿಣಾಮವನ್ನುಂಟು ಮಾಡುವುದಕ್ಕೆ ಪ್ರಾರಂಭಿಸಿದವು. ಸದ್ಯ ತಳಮಟ್ಟದಲ್ಲಿ ಹೆಚ್ಚಿನ ಜನ ಮತ್ತು ಗುಂಪುಗಳು ತೊಡಗಿಕೊಂಡಿದ್ದು, ವಿವಿಧ ಶೈಕ್ಷಣಿಕ ಸಂವಾದಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳ ಧನಾತ್ಮಕ ಅಂಶವೆಂದರೆ ಯಾರು ಹೊರಗುಳಿದಿದ್ದರೋ ಅವರು ನಮ್ಮ ಕಾಲದ ಅತ್ಯಂತ ಮಹತ್ವದ ಜೀವನ ಕೌಶಲವಾದ ಓದು ಮತ್ತು ಬರೆಯುವುದನ್ನು ಗಳಿಸುವ ಸಮಾಜದ ತೆಕ್ಕೆಯೊಳಗೆ ಸೇರಿಕೊಳ್ಳುವಂತಾದದ್ದು. ಹಲವು ವಿದ್ವಾಂಸರು ಮತ್ತು ಸಾಮಾಜಿಕ ಅರಿವುಳ್ಳ ಜನರು ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯನ್ನ ವಹಿಸಿಕೊಳ್ಳುವುದಕ್ಕೆ ಆರಂಭಿಸಿದರು. ಮಕ್ಕಳ ಆರಂಭಿಕ ವರ್ಷಗಳ ಸಾಮಾಜಿಕ ತಳಪಾಯ ಮತ್ತು ಪೌಷ್ಟಿಕತೆ, ಆರೋಗ್ಯ ಸುಧಾರಣೆಗಾಗಿ ಆರಂಭಿಕ ಬಾಲ್ಯಕಾಲದ ಶಿಕ್ಷಣದ (Early Childhood Education-ECE) ಪರವಾಗಿ ವಕಾಲತ್ತು ವಹಿಸುವುದು ಆರಂಭಗೊಂಡವು. ಆದಾಗ್ಯೂ, ಇದರ ಇನ್ನೊಂದು ಮಗ್ಗುಲಿನ ಕಥೆ ಅರೆಮನಸ್ಕ ಬದ್ಧತೆ ಮತ್ತು ರಾಜಕೀಯ ಇಚ್ಛಾಶಕ್ತಿಯದ್ದು; ಸಮಾಜದ ದೊಡ್ಡ ಭಾಗದ ಸಂಪೂರ್ಣ ನಿರಾಸಕ್ತಿ; ಹಾಗೂ ಅಗತ್ಯತೆ ಮತ್ತು ಬೇಡಿಕೆಗಳನ್ನು ಅರ್ಥಮಾಡಿಕೊಳ್ಳಲು ಬೇಕಾಗಿರುವ ಶೈಕ್ಷಣಿಕ ಸಂಶೋಧನೆ,

ಆವಿಷ್ಕಾರಗಳ ಕೊರತೆ. ಆದ್ದರಿಂದ, ಮಕ್ಕಳ ಕಲಿಕಾ ಫಲಿತಗಳು ಮತ್ತು ಕಲಿಕಾ ಅನುಭವಗಳ ಮೇಲಿನ ತಕ್ಷಣದ ಪರಿಣಾಮ ಮತ್ತು ಪ್ರಭಾವ ಉತ್ತೇಜಕರವಾಗಿ ಇರಲಿಲ್ಲ. ಧನಾತ್ಮಕ ಅಂಶವನ್ನು ಕುರಿತ ಮೊದಲ ವಿವರಣೆ ಭರವಸೆಯನ್ನು ಕೊಡುತ್ತದೆ ಮತ್ತು ವ್ಯಾಪಕವಾದ ಹತಾಶೆಗಳ ವಿರುದ್ಧ ಹೋರಾಡಲು ನೆರವಾಗುತ್ತದೆ. ಆದರೆ ಎರಡನೆಯ ವಿವರಣೆ, ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾ-ಪೂರ್ವಕವಾಗಿ ಈಗಾಗಲೇ ನಿರಾಶೆಗೊಳಗಾಗಿರುವ ಸಮಾಜಕ್ಕೆ ಮತ್ತಷ್ಟು ಹತಾಶೆಯನ್ನು ಮೂಡಿಸುತ್ತದೆ.

ನನ್ನ ತಿಳುವಳಿಕೆ ಮತ್ತು ದೃಷ್ಟಿಕೋನಗಳ ಪ್ರಕಾರ, 'ಎಲ್ಲರಿಗೂ ಶಿಕ್ಷಣ' ಎಂಬ ಸಲಹೆಯು ಒಂದು ಹೊಸ ಮತ್ತು ಸವಾಲಿನ ಸಾಮಾಜಿಕ ಪರಿಕಲ್ಪನೆ. ಹೊಸ ಸಂದರ್ಭಕ್ಕೆ ಪ್ರತಿಯಾಗಿ ಹಳೆಯ ಮತ್ತು ಪ್ರಚಲಿತದಲ್ಲಿರುವ ಮಾನದಂಡಗಳನ್ನು ಮೌಲ್ಯಮಾಪನ ಮಾಡುವುದರಿಂದ ಮಾತ್ರ ಅಪೂರ್ಣ ಮತ್ತು ತಪ್ಪು ನಿರೂಪಣೆಗೆ ಕಾರಣವಾದ ಪರಿಸ್ಥಿತಿಯೊಳಗೆ ಹುದುಗಿರುವ ಸಮಸ್ಯೆಗಳನ್ನು ಹೊರಗೆಳೆಯುವುದು ಸಾಧ್ಯವಾಗುತ್ತದೆ. ಅದು ಶೈಕ್ಷಣಿಕ ಪ್ರಯತ್ನಗಳ ಜೊತೆ ತೊಡಗಿಸಿಕೊಂಡಿರುವವರನ್ನು ಮತ್ತಷ್ಟು ನಿರಾಶೆಗೊಳಿಸಬಹುದು. ಆದ್ದರಿಂದ, ಈ ಮಹತ್ವದ ಯೋಜನೆಗೆ ಹೊಸ ಮಾನದಂಡಗಳನ್ನು ಹುಡುಕುವುದಕ್ಕೆ ಹೊಸ ದೃಷ್ಟಿಕೋನಗಳು ಬೇಕು.

**ಬದಲಾಗುತ್ತಿರುವ ಸಂದರ್ಭವನ್ನು ಅರ್ಥೈಸುವುದು:**
ನಮ್ಮ ದೇಶ ಹಲವು ಬಗೆಯ ವೈವಿಧ್ಯತೆಗಳಿಂದ ಮಾತ್ರವಲ್ಲ ಅಸಮಾನತೆಗಳಿಂದಲೂ ಕೂಡಿದೆ. ಮೊದಲನೆಯದಾಗಿ, ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುತ್ತಿರುವ ಮಕ್ಕಳು, ಶಿಕ್ಷಕರು ಮತು ಇತರರು ಸಾಂಪ್ರದಾಯಿಕ ಪಿತೃಪ್ರಧಾನ ಮತ್ತು ಜಮೀನ್ದಾರಿ ವ್ಯವಸ್ಥೆಯ ಹಿನ್ನೆಲೆಯಿರುವ ಒಂದು ಸಮಾಜದಿಂದ ಬಂದವರಾಗಿರುತ್ತಾರೆ. ಎರಡನೆಯದಾಗಿ ಶಾಲೆಗಳು ಕೂಡಾ ಇದೇ ತರಹದ ಮತ್ತು ಇತರ ಹಲವು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಸಮಾನತೆಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಸಾಮಾಜಿಕ-ರಾಜಕೀಯ ಸಮಾನತೆ, ಪರಸ್ಪರ ಸಹೋದರತೆ ಅಥವಾ ಹೃದಯವಂತಿಕೆಯಿಂದ ಶಿಕ್ಷಣವು ಪ್ರತ್ಯೇಕಗೊಂಡಿತಾದರೆ ಅದರ ಅರ್ಥವನ್ನು ಕಳೆದುಕೊಳ್ಳುತ್ತದೆ ಎನ್ನುವುದು ಮೂರನೆಯ ಆಯಾಮ.

ಕೆಲವು ಘಟನಾವಳಿಗಳ ಬೆಳಕಿನಲ್ಲಿ ನಾವು ಈ ವಿಷಯವನ್ನು ನೋಡೋಣ. ಮಧ್ಯ ಭಾರತದ ಶಾಲೆಯೊಂದಕ್ಕೆ ಪರಿವೀಕ್ಷಣೆಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (District Institute of Education and Training-DIET) ಪ್ರಾಂಶುಪಾಲರು ಭೇಟಿ ನೀಡಿದರು. ಹಾಜರಿ ಪುಸ್ತಕವನ್ನು ಪರಿಶೀಲಿಸುವಾಗ ಕೆಲವು ಮಕ್ಕಳ ಹೆಸರುಗಳಲ್ಲಿ ದೋಷವಿರುವಂತೆ ಅವರಿಗೆ ಅನ್ನಿಸಿತು. ಪ್ರಾಂಶುಪಾಲರು ಈ ವಿಷಯವನ್ನು ಶಿಕ್ಷಕರೊಂದಿಗೆ ಚರ್ಚಿಸಿದರು. 'ಸರ್ ನಾನೇನು ಮಾಡಲಿ? ಅನಕ್ಷರಸ್ಥ ಪೋಷಕರು ಅವರಿಗೆ ಹೀಗೆ ಹೆಸರಿಟ್ಟಿದ್ದಾರೆ' ಎಂದು ಶಿಕ್ಷಕರು ಹೇಳಿದರು.

ಪ್ರಾಂಶುಪಾಲರು ಪೋಷಕರನ್ನು ಕರೆತರುವಂತೆ ಹೇಳಿ ಮಕ್ಕಳನ್ನು ಮನೆಗೆ ಕಳುಹಿಸಿದರು. ಬಹೇಲಿಯ ಸಮುದಾಯದವರೇ ಹೆಚ್ಚಿರುವ ಹಳ್ಳಿಯ ಪಕ್ಕದಲ್ಲೇ ಶಾಲೆ ಇತ್ತು. ಮುಂಜಾನೆ ಅಥವಾ ಮುಸ್ಸಂಜೆಯ ಹೊತ್ತಲ್ಲಿ ಹಕ್ಕಿ ಹಿಡಿಯುವ ಕೆಲಸ ಮಾಡುತ್ತಾರಾದ್ದರಿಂದ ಕೂಡಲೇ ಅವರು ಶಾಲೆಗೆ ಬಂದರು. ನಂತರ ಪ್ರಾಂಶುಪಾಲರು ಮಕ್ಕಳ ಹೆಸರುಗಳನ್ನು ಹೆಚ್ಚು ಸುಂದರವಾಗಿ ಅಥವಾ 'ನಾಗರೀಕ'ವಾಗಿ ಕಾಣುವಂತೆ ಬದಲಾಯಿಸತೊಡಗಿದರು. ಉದಾಹರಣೆಗೆ, ಚಿಂತಾಬಾಯಿಯ ಹೆಸರನ್ನು ಚೇತನಾಕುಮಾರಿಯೆಂದು, ಕಲ್ಲಿಬಾಯಿಯ ಹೆಸರನ್ನು ಕಲಾವತಿಯೆಂದು ಪರಿವರ್ತಿಸಿದರು. ಪೋಷಕರು ಈ ಬದಲಾವಣೆಯನ್ನು ಇಷ್ಟಪಟ್ಟರೋ ಇಲ್ಲವೋ, ಆದರೆ ಯಾವುದೇ ತಕರಾರು ಎತ್ತಲಿಲ್ಲ. ಬಹುಶಃ ಅವರು ತಮ್ಮ ಮಕ್ಕಳಿಗೆ ಶಿಕ್ಷಣ ಪಡೆಯಲು ಇದೊಂದು ಕರಾರು ಇರಬೇಕೆಂದು ಒಪ್ಪಿಕೊಂಡಿರಬೇಕು.

**ಚಿಂತಾಬಾಯಿ ಮತ್ತು ಕಲ್ಲಿ ಹೆಸರುಗಳ ಬದಲಾವಣೆಯು ಎತ್ತಿದ ಕೆಲವು ಪ್ರಮುಖ ಪ್ರಶ್ನೆಗಳು:**
ಶಾಲೆಯಲ್ಲಿ ಆ ಮಕ್ಕಳ ಮೂಲ ಹೆಸರುಗಳಿಗೆ ಸ್ಥಾನವಿಲ್ಲವಾದರೆ, ಇನ್ನು ಅಲ್ಲಿ ಅವರ ಜೀವನಾನುಭವಗಳಿಗೆ ಅವಕಾಶವಿದ್ದೀತೇ?

- ಶಿಕ್ಷಣವೆಂದರೆ ಚೇತನಾಕುಮಾರಿ, ಕಲಾವತಿಯವರನ್ನು ಪ್ರತಿನಿಧಿಸುವ ಸಮಾಜದ ಆ ವರ್ಗಕ್ಕೆ ಮಾತ್ರ ಸೀಮಿತ ಎಂಬ ಅರ್ಥವೇ?
- ಶಿಕ್ಷಣ ಪಡೆಯಬೇಕೆಂದರೆ ಒಂದು ನಿರ್ದಿಷ್ಟ ಸಮುದಾಯವು ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಬಲಿ ಕೊಡಬೇಕೆ?

ಇತರೆ ಉದಾಹರಣೆಗಳನ್ನ ಉಲ್ಲೇಖಿಸಬಹುದು.

ಹೆಚ್ಚು ಶುಭ್ರವಾದ ಬಟ್ಟೆಗಳನ್ನು ತೊಟ್ಟು ಬರುವ ಮಕ್ಕಳನ್ನು ಹೊಗಳುವುದು ಮತ್ತು ಕೊಳೆಯಾದ ಬಟ್ಟೆ ತೊಡುವ ಮಕ್ಕಳನ್ನು ಶಿಕ್ಷಿಸುವುದು ಶಾಲೆಗಳಲ್ಲಿ ಸಾಮಾನ್ಯ. ನಾವಿದನ್ನು ಸೂಕ್ಷ್ಮತೆಯಿಂದ ಗಮನಿಸಿದರೆ, ಇಂತಹ ಸನ್ನಿವೇಶಗಳು ಭಾವನಾತ್ಮಕವಾಗಿ ಮಕ್ಕಳಲ್ಲಿ ಎಂತಹ ಹಾನಿಯನ್ನುಂಟು ಮಾಡುತ್ತವೆ ಎಂಬುದು ಗಮನಕ್ಕೆ ಬಂದೀತು. ಭಾಷೆಯೂ ಒಂದು ಪ್ರಮುಖ ವಿಷಯವೇ ಆಗಿದೆ. ಅದರ ಪ್ರಮಾಣಿತ ರೂಪ, ಸಮರ್ಪಕ ಉಚ್ಚಾರಣೆ ಇತ್ಯಾದಿಗಳು ಕುಟುಂಬದ ಮೊದಲ ತಲೆಮಾರಿನ ಶಾಲಾ ಕಲಿಕಾರ್ಥಿಗಳಿಗೆ ಅಸ್ತಿತ್ವದ ಬಿಕ್ಕಟ್ಟನ್ನು ತಂದೊಡ್ಡುತ್ತವೆ. ಇದನ್ನು ಅನುಭವಿಸಿದ ಯಾರಿಗಾದರೂ ಇದು ಅಮಾನವೀಯ ಮತ್ತು ವ್ಯಕ್ತಿಯ ಆತ್ಮಗೌರವವನ್ನು ಅಲ್ಲಾಡಿಸಬಲ್ಲುದು ಎಂಬುದು ಗೊತ್ತಾಗುತ್ತದೆ. ಇಂತಹ ವಿಚಾರಗಳ ಜೊತೆ ಒದ್ದಾಡುತ್ತಿರುವ ಮಕ್ಕಳನ್ನು ಶಿಕ್ಷಕರು ಆಗಾಗ 'ಕಲಿಕೆ-ಅಸಾಧ್ಯವಾದ-ಮಕ್ಕಳ' (Not-able-to-learn) ಗುಂಪಿಗೆ ಸೇರಿಸುತ್ತಾರೆ.

ಈ ಎಲ್ಲಾ ನಿದರ್ಶನಗಳು ಶಿಕ್ಷಣದ ಸುತ್ತಲಿನ ಅರ್ಥೈಸುವಿಕೆ ಮತ್ತು ಸಂವೇದನೆಗಳ ಬಗ್ಗೆ ಪ್ರಶ್ನೆ ಹುಟ್ಟಿಸುತ್ತವೆ. ಬಲು ದೊಡ್ಡ ಪ್ರಶ್ನೆಗಳೆಂದರೆ:

- ಮಕ್ಕಳು ಒಂದು ಚೌಕಟ್ಟಿಗೆ ಹೊಂದಿಕೆಯಾಗಬೇಕೇ, ಅಥವಾ ಅವರ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಬದಲಾಯಿಸಿ-ಕೊಳ್ಳುವಂತೆ ಶೈಕ್ಷಣಿಕ ವ್ಯವಸ್ಥೆಯು ನಮ್ಯವಾಗಿರಬೇಕೇ?

- ಮಕ್ಕಳಲ್ಲಿ ಹಾಲಿ ಇರುವ ಜ್ಞಾನ ಮತ್ತು ಶಾಲೆಯೊಳಗೆ ಜ್ಞಾನವನ್ನು ಸಂರಚಿಸಿಕೊಳ್ಳುವ ಪ್ರಕ್ರಿಯೆಯ ಮಧ್ಯೆ ಪರಸ್ಪರ ಸಂವಾದವನ್ನು ಸ್ಥಾಪಿಸುವುದು ಅತ್ಯಂತ ಪ್ರಮುಖವಾದದ್ದು ಎಂಬುದನ್ನು ನಾವು ಹೇಗೆ ಕಂಡುಕೊಳ್ಳಬಹುದು?

- ಹೇಗೆ ಅಂತಹ ಒಂದು ಅರ್ಥೈಸುವಿಕೆ ಶೈಕ್ಷಣಿಕ ಪ್ರಕ್ರಿಯೆಯ ಭಾಗವಾದೀತು?

ಮುಂದುವರಿದು ಶಿಕ್ಷಕರ ತಯಾರಿ ಮತ್ತು ಸ್ವಾಯತ್ತತೆಯ ಕುರಿತು ಪರಿಶೀಲಿಸೋಣ. ಈ ಸಂದರ್ಭದಲ್ಲಿ ನನ್ನದೇ ಬೋಧನಾ ದಿನಗಳ, ಚಿಂತನೆಗೆ ಹಚ್ಚುವಂಥ ಒಂದು ಘಟನೆಯು ನೆನಪಾಗುತ್ತಿದೆ. ಒಂದು ದಿನ ಗುಂಡಿಲಾಲ್ ಎಂಬ ಹೆಸರಿನ ಮಗುವಿನ ಬಗ್ಗೆ ನನ್ನ ತರಗತಿಯ ಇತರ ಮಕ್ಕಳು ಒಂದೇ ಸಮನೆ ದೂರುತ್ತಿದ್ದರು. ನಾನು ಮಕ್ಕಳಿಗೆ ಒಂದಷ್ಟು ಕೆಲಸವನ್ನು ಮಾಡಲು ಕೊಟ್ಟು ನನ್ನದೇ ಕೆಲವು ಕೆಲಸಗಳಲ್ಲಿ ತಲ್ಲೀನನಾಗಿದ್ದೆ. ಹಾಗಾಗಿ ನನ್ನ ಸಂಪೂರ್ಣ ಗಮನವು ತರಗತಿಯ ಮೇಲೆ ಇರಲಿಲ್ಲ. ಕೊನೆಗೊಮ್ಮೆ ದೂರುಗಳನ್ನು ನಿರ್ಲಕ್ಷಿಸುವುದು ಕಷ್ಟವಾಗಿ ನಾನು ಗುಂಡಿಲಾಲನನ್ನು ಕರೆದು, 'ನಿನ್ನ ತುಂಟತನ ಅತಿಯಾಯಿತು! ಕಿವಿಗಳನ್ನು ಹಿಡಿದುಕೋ' ಎಂದು ಕಟುವಾಗಿ ಹೇಳಿದೆ.

ಗುಂಡಿಲಾಲ್ ಪ್ರತಿಕ್ರಿಯಿಸದಿದ್ದಾಗ ಮತ್ತೊಮ್ಮೆ ಜೋರಾದ ಧ್ವನಿಯಲ್ಲಿ ನಾನು ಹೇಳಿದೆ. ಈ ಬಾರಿ ಆತ ಮುಂದೆ ಬಂದು ನನ್ನ ಕಿವಿಗಳನ್ನು ಹಿಡಿದುಕೊಂಡ. ಅವನ ಈ ವರ್ತನೆ ಕಂಡು ನನಗೆ ಮೊದಲು ಆಶ್ಚರ್ಯವಾಯಿತು, ಕೋಪಗೊಂಡೆ. ಆದರೆ ನನ್ನ ಸೂಚನೆಯು ಕೇವಲ ಕಿವಿ ಹಿಡಿದುಕೋ ಎಂದು ಮಾತ್ರವಾಗಿತ್ತು ಎಂಬುದು ನಂತರ ಅರಿವಾಯಿತು. ಹಾಗಾಗಿ ಇದರಲ್ಲಿ ಗುಂಡಿಲಾಲನ ತಪ್ಪೇನೂ ಇರಲಿಲ್ಲ. ಆತ ಕಿವಿಗಳನ್ನು ಹಿಡಿದು-ಕೊಳ್ಳುವುದನ್ನು ಶಿಕ್ಷೆ ಎಂಬುದಾಗಿ ಭಾವಿಸಲಿಲ್ಲ ಅಥವಾ ಆತನಿಗೆ ಇಂತಹ ವರ್ತನೆಯ ಯಾವುದೇ ಪೂರ್ವಾನುಭವವೂ ಇರಲಿಲ್ಲ.

ಇಂತಹ ಹಲವು ಸಂಗತಿಗಳನ್ನು ಎಲ್ಲಾ ಮಕ್ಕಳು ತಿಳಿದಿದ್ದಾರೆ ಎಂದು ನಾವು ಊಹಿಸಿಕೊಳ್ಳುತ್ತೇವೆ. ಆದರೆ ನಾವು ಹೊಸ ತಲೆಮಾರಿನ ಶಾಲಾ ಕಲಿಕಾರ್ಥಿಗಳಿಗೆ ಶಾಲೆಯ ವಾತಾವರಣ ಮತ್ತು ಆಚರಣೆಗಳು ಹೊಸತು ಎಂಬುದನ್ನು, ಇವುಗಳು ಅವರಿಗೆ ವಿಲಕ್ಷಣವಾಗಿ ಮಾತ್ರವಲ್ಲ ಅವರ ಅಂತಃಸ್ಫುರಣೆಗೆ ಹಾನಿ ಮಾಡುತ್ತವೆ ಎಂಬುದನ್ನು ಮರೆತುಬಿಡುತ್ತೇವೆ.

**ನನ್ನ ಪಯಣ:**
ಮಧ್ಯಪ್ರದೇಶದ ರೈಸೆನ್ ಜಿಲ್ಲೆಯ ಅರಣ್ಯ ಮಧ್ಯದ ಬುಡಕಟ್ಟು ಹಳ್ಳಿಯೊಂದರಲ್ಲಿ ಕೆಲಸ ಮಾಡುವಾಗ ಸಿಕ್ಕ ಅನುಭವ, ನನಗೆ ಹಲವು ವಿಷಯಗಳನ್ನು ಕಲಿಸಿತು. ಆದರೆ ಇಲ್ಲಿ ನಾನು ಉಲ್ಲೇಖಿಸಲು ಇಷ್ಟಪಡುವ ವಿಷಯ ಈ ಲೇಖನದ ಕೇಂದ್ರ ವಿಚಾರವಾದ 'ಎಲ್ಲರಿಗೂ ಶಿಕ್ಷಣ'ಕ್ಕೆ ನೇರವಾಗಿ ಸಂಬಂಧಿಸಿದ್ದಾಗಿದೆ.

ಗೊಂಡ ಆದಿವಾಸಿ ಸಮುದಾಯದ ಮಕ್ಕಳಿಗೆ ಕಲಿಸುವುದಕ್ಕೆ ನಾನು ಪ್ರಾರಂಭಿಸಿದಾಗ, ಶತಮಾನಗಳಿಂದ ಆಡುಗಳನ್ನು ಮೇಯಿಸುತ್ತಾ, ಹೊಲಗಳಲ್ಲಿ ಹಕ್ಕಿಗಳನ್ನು ಬೆದರಿಸುತ್ತಾ, ತೆಂಡು ಎಲೆ ಅಥವಾ ಮಹುವಾ ಹಣ್ಣುಗಳನ್ನು ಸಂಗ್ರಹಿಸುತ್ತಾ, ಗೆಡ್ಡೆಗೆಣಸುಗಳನ್ನು ಅಗೆಯುತ್ತಾ, ಮರಗಳನ್ನು ಏರುತ್ತಾ, ನದಿಗಳಲ್ಲಿ ಈಜಾಡುತ್ತಾ ತಮ್ಮ ದಿವಸಗಳನ್ನು ಕಳೆಯುತ್ತಿದ್ದ ಅವರನ್ನು, ನಾಲ್ಕರಿಂದ ಐದು ಗಂಟೆಗಳ ಶಾಲಾ ಅವಧಿಯಲ್ಲಿ ಒಂದೇ ಜಾಗದಲ್ಲಿ ಕೂರಿಸುವುದೇ ಒಂದು ಸವಾಲಿನ ಕೆಲಸ ಎಂಬುದು ನನಗೆ ಬಲುಬೇಗನೆ ಅರಿವಾಯಿತು. ಆ ಮಕ್ಕಳು ಪ್ರತಿದಿನ ಹಲವು ಕಿಲೋಮೀಟರ್‌ಗಳಷ್ಟು ದೂರ ನಡೆಯುವ ಅಭ್ಯಾಸ ಹೊಂದಿದವರು ಮತ್ತು ದೈಹಿಕ ಶ್ರಮದ ರೂಢಿ ಇರುವವರು.

ಅಷ್ಟೊಂದು ದೀರ್ಘ ಸಮಯ ಒಂದೇ ಸ್ಥಳದಲ್ಲಿ ಕೂತಿರುವುದಕ್ಕೆ ಅವರಿಗೆ ಹೇಗೆ ಸಾಧ್ಯವಾಗುತ್ತದೆ? ಇನ್ನು ಅವರಿಗೆ ಓದುವ ಮತ್ತು ಬರೆಯುವ ಸಾಮರ್ಥ್ಯದ ಕಲಿಕೆಯನ್ನು ನಿರ್ವಹಿಸುವ ಬಗೆ ಹೇಗೆ? ಅವರಿಗೆ ಪ್ರತಿ ಮಂಗಳವಾರಗಳಲ್ಲಿ ವಾರದ ಸಂತೆ ಇರುವಾಗ ಭಾನುವಾರದ ಶಾಲಾ ಬಿಡುವಿಗೆ ಇರುವ ಮಹತ್ವವಾದರೂ ಏನು? ನಾಟಿ ಅಥವಾ ಬೆಳೆಗಳ ಕಟಾವು ಮಾಡುವ ಸಮಯದಲ್ಲಿ ಸಣ್ಣ ರೈತಾಪಿ ಕುಟುಂಬಗಳ ಮಕ್ಕಳ ಪಾತ್ರ ಹೇಗೆ ಬದಲಾಗುತ್ತದೆ? ಅಂತಹ ಒಂದು ಸಂದರ್ಭವನ್ನು ಶಾಲಾ ಆಡಳಿತವು ಹೇಗೆ ನಿರ್ವಹಿಸುತ್ತದೆ? ಶಾಲೆಗಳಿಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುವವರ ಎದುರು ಇಂಥ ಪ್ರಶ್ನೆಗಳು ತಲೆದೋರಲೇಬೇಕು. ಈ ಪ್ರಶ್ನೆಗಳು ಶಾಲೆ ಒಂದು ಸ್ಥಿರವಾದ ಜಾಗ, 45 ನಿಮಿಷಗಳ ಅವಧಿಗೆ ದಿನವನ್ನು ವಿಭಜಿಸಿ ರಚಿತವಾದ ವೇಳಾಪಟ್ಟಿ ಇರುವ ವ್ಯವಸ್ಥೆ ಎಂಬ ಪ್ರಚಲಿತ ಗ್ರಹೀತಗಳಿಂದ ದೂರ ಸರಿದು ಶಾಲೆಯನ್ನು ಬೇರೆಯದೇ ದೃಷ್ಟಿಯಿಂದ ನೋಡಲು ಒತ್ತಾಯಿಸುತ್ತದೆ. ಮಕ್ಕಳಿಗೆ, ಅವರ ಹವ್ಯಾಸಗಳು ಮತ್ತು ಆಸಕ್ತಿಗಳ ಮೇಲಿಂದ ವಿಭಿನ್ನವಾದ ಒಂದು ದೈಹಿಕ ಮತ್ತು ಸಾಂಸ್ಕೃತಿಕ ತಯಾರಿ ಮಾಡುವುದೆಂದರೆ, ಶಿಕ್ಷಕರಿಗೆ ಸ್ವಾಯತ್ತತೆಯನ್ನು ಒಳಗೊಂಡು ಸಂಪೂರ್ಣ ಶಿಕ್ಷಣ ವ್ಯವಸ್ಥೆಯನ್ನೇ ಪುನಾರಚಿಸುವ ಅವಶ್ಯಕತೆ ಎಂದಾಗುತ್ತದೆ.

ನಾನು ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಸಮಯ ಸಂದರ್ಭಗಳು ನನಗೆ ಅನುಕೂಲಕರವಾಗಿದ್ದವು. ಆ ಶಾಲೆಯು ಸರಕಾರಿ ಶಾಲೆಯಾಗಿರಲಿಲ್ಲ ಮತ್ತು ಅದಕ್ಕೆ ಸರಕಾರಿ ನೋಂದಣಿಯು ಅವಶ್ಯಕತೆಯಿರಲಿಲ್ಲ. ಜೊತೆಗೆ ಆ ಹಳ್ಳಿಯ ಜನರ ಅನುಭವದಲ್ಲಿ ಅಥವಾ ಆಶಯದಲ್ಲಿ ಶಿಕ್ಷಣವನ್ನು ಕುರಿತಂತೆ ಒಂದು ಪೂರ್ವನಿರ್ಧರಿತ ಅಭಿಪ್ರಾಯವೂ ಇರಲಿಲ್ಲ. ಈ ಎರಡೂ ಸಂಗತಿಗಳು ಮಕ್ಕಳ ಆಸಕ್ತಿ ಮತ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟು ನನ್ನ ಹೊಸ ಆಲೋಚನೆಗಳ ಜೊತೆಗೆ ಪ್ರಯೋಗ ಮಾಡುವುದಕ್ಕೆ ಬೇಕಾದ ನಮ್ಯತೆಯನ್ನು ಒದಗಿಸಿದವು. ಈ ರೀತಿ ಶಿಕ್ಷಕನಾಗಿ ನನಗೆ ಅಚಾನಕ್ ಆಗಿ ಒದಗಿಬಂದ ಸ್ವಾಯತ್ತತೆಯನ್ನು ನಾನು ಸಂಪೂರ್ಣವಾಗಿ ಬಳಸಿಕೊಂಡೆ. ನಿರೀಕ್ಷೆಗೂ ಮೀರಿದ ಫಲಿತಾಂಶವು ಬಂದಿತ್ತು. ಬಹುತೇಕ ಮಕ್ಕಳು ತುಂಬು ಆಸಕ್ತಿಯಿಂದ ಸಾಕ್ಷರತೆಯ ಪ್ರಪಂಚಕ್ಕೆ ದಾಟಿಕೊಂಡರು. ಅವರಲ್ಲಿ ಅರ್ಧ-ಭಾಗಕ್ಕಿಂತ ಹೆಚ್ಚಿನ ಮಕ್ಕಳು ತಮ್ಮ ಶಿಕ್ಷಣವನ್ನು ಶಾಲೆಯನ್ನೂ ಮೀರಿ ಮುಂದುವರಿಸಿದರು. ಆ ಹಳ್ಳಿಯ ಬೇರೆ ಮತ್ತು ಇತರ ಹತ್ತಿರದ ಹಳ್ಳಿಗಳ ಮಕ್ಕಳಿಗೆ ಹೋಲಿಸಿದರೆ ಅವರು ಶಿಕ್ಷಣದಲ್ಲಿ ಗಮನಾರ್ಹ ಸಾಧನೆ ಮಾಡಿದರು. ಈ ಮಕ್ಕಳಿಗೆ ತಮ್ಮ ಆತ್ಮವಿಶ್ವಾಸವನ್ನು ಅಥವಾ ಸಾಂಸ್ಕೃತಿಕ ಅಸ್ಮಿತೆಯನ್ನು ಕಳೆದುಕೊಳ್ಳುವ ಯಾವ ಸಂದರ್ಭವೂ ಎದುರಾಗಲಿಲ್ಲ.

**ನಿರೂಪಣೆಯನ್ನು ಬದಲಾಯಿಸುವುದು – ಮುಂದಿನ ದಾರಿ:**
ಮೂಲ ಚಿಂತನೆಯ ಸುತ್ತ ಸಕಾರಾತ್ಮಕ ನಿರೂಪಣೆಗಳನ್ನು ಕಟ್ಟಿ, ನಕಾರಾತ್ಮಕ ಗ್ರಹಿಕೆಗಳನ್ನು ಎದುರಿಸಿ ನಿಲ್ಲದಿದ್ದರೆ ಸಾಮಾಜಿಕ ಪರಿವರ್ತನೆಯನ್ನು ಸಾಧಿಸಲು ಸಾಧ್ಯವಿಲ್ಲ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ (ಮತ್ತು ಪ್ರಾಥಮಿಕ ಮಟ್ಟದ ಕೆಲವು ಹಂತದವರೆಗೆ) ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಧ್ವನಿ ಇಲ್ಲದ ಅಥವಾ ಆಯ್ಕೆಗಳಿಲ್ಲದ ಸಮುದಾಯಗಳ ಮಕ್ಕಳ ಅಗತ್ಯವನ್ನು ಪೂರೈಸುವ ಜಾಗಗಳಾಗುತ್ತವೆ. ಶ್ರೀಮಂತ ಮತ್ತು ಮಧ್ಯಮ ವರ್ಗದವರು ಸರಕಾರಿ ವ್ಯವಸ್ಥೆಯಿಂದ ಖಾಸಗಿ ಶಾಲೆಗಳಿಗೆ ಬದಲಾಯಿಸಿ-ಕೊಳ್ಳುವುದು ಅವರು ಶಾಲೆ ಮತ್ತು ವ್ಯವಸ್ಥೆ ಎರಡನ್ನೂ ಕೈಬಿಟ್ಟಂತೆಯೇ ಸರಿ. ಇದು ಸರಕಾರಿ ಶಾಲೆಯಲ್ಲಿರುವ ಮಕ್ಕಳ ಪೋಷಕರು, ದೊಡ್ಡ ಶಿಕ್ಷಕ ಸಮುದಾಯ, ಅಲ್ಲದೆ ಸರಕಾರದ ಮೇಲೆಯೂ ಎಂತಹ ಪರಿಣಾಮ ಬೀರುತ್ತದೆಂಬ ಸಂಪೂರ್ಣ ತಿಳುವಳಿಕೆಯೇ ಇಲ್ಲದೆ ಸರಕಾರಿ ಶಿಕ್ಷಣ ವ್ಯವಸ್ಥೆಯನ್ನು ವ್ಯತಿರಿಕ್ತವಾಗಿ ಟೀಕಿಸುವುದಕ್ಕೆ ದಾರಿ ಮಾಡಿಕೊಟ್ಟಿದೆ. ಸರಕಾರಿ

ಶಾಲೆಯಿಂದ ಖಾಸಗಿ ಶಾಲಾ ವ್ಯವಸ್ಥೆಗೆ ನಡೆದ ಆ ಬಗೆಯ ಸ್ಥಿತ್ಯಂತರವು, ನಿರಾಶಾವಾದವನ್ನು ಬೆಳೆಸಿತು ಮತ್ತು ಸಮಾಜದಲ್ಲಿ ಅಂತರವನ್ನು ಹೆಚ್ಚಿಸಿತು.

ಮಗುವೊಂದು ಶಾಲೆಯ ಹೊಸ್ತಿಲು ದಾಟಿ ಬಂದಾಗ, ಅದು ಕೇವಲ ಬ್ಯಾಗು, ಸ್ಲೇಟು, ಬಳಪ ಮತ್ತು ಪುಸ್ತಕಗಳನ್ನು ಮಾತ್ರವಲ್ಲದೆ ಅದರ ಸಂಪೂರ್ಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನೂ ಕರೆತಂದಿರುತ್ತದೆ: ಮಗುವಿನ ತುಂಬಿದ ಅಥವಾ ಖಾಲಿ ಹೊಟ್ಟೆ, ಅದರ ಕುತೂಹಲ, ಭಯ, ಹಿಂಜರಿಕೆ, ಮಾತೃಭಾಷೆ ಮತ್ತು ಇತರ ಅಂಶಗಳು. ಆ ಮಗು ಹಿಂದೆಂದೂ ಶಿಕ್ಷಣದ ವಿನ್ಯಾಸದ ಜೊತೆಗೆ ಸಂಬಂಧವೇ ಇರದಿದ್ದ ಕುಟುಂಬದಿಂದ ಬಂದಿದ್ದ ಪಕ್ಷದಲ್ಲಿ, ಶಾಲೆ ಮತ್ತು ಶಿಕ್ಷಕರು ಮತ್ತಷ್ಟು ನಮ್ಯವಾಗಿರುವುದು ಅವಶ್ಯವಾಗುತ್ತದೆ. ಒಂದು ವೇಳೆ ಶಿಕ್ಷಕರು ಅಥವಾ ಶಾಲೆಯ ಬೇಡಿಕೆಗಳು ಕಠಿಣವಾಗಿದ್ದು ಮತ್ತು ಅವರು ಮಗುವಿನ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳಲು ಮನಸ್ಸು ಮಾಡದಿದ್ದರೆ, ಕೇವಲ ವಿಫಲತೆಯ ಫಲಿತಾಂಶವಷ್ಟೇ ಕಾಣಿಸೀತು. ಮತ್ತು ಈ ಫಲಿತಾಂಶವನ್ನು ಮಗುವಿನ ವೈಫಲ್ಯವೆಂದು ಸಮಾಜವು ನೋಡುತ್ತದೆ. ಈಗಾಗಲೇ ಪ್ರತಿಕೂಲತೆ ಇರುವ ಗುಂಡಿಲಾಲ್, ಚಿಂತಾಬಾಯಿ ಮತ್ತು ಕಲ್ಲಿಯಂತಹ ಮಕ್ಕಳು ಶಾಲೆಯಲ್ಲಿ ಯಶಸ್ಸು ಗಳಿಸಲು ಅವರದೇ ಸಂಸ್ಕೃತಿ, ಅನುಭವ ಮತ್ತು ಪ್ರತಿಭೆಗಳನ್ನು ಗೌರವಯುತವಾಗಿ ಒಳಗೊಳ್ಳುವ ಅವಕಾಶಗಳನ್ನು ಸೃಷ್ಟಿಸುವ ಅಗತ್ಯವಿದೆ. ಶಾಲೆಯಲ್ಲಿ ಏನೇ ನಡೆದರೂ ಅವು ಆ ಮಕ್ಕಳ ಅಗತ್ಯ ಮತ್ತು ಹಿನ್ನೆಲೆಯ ಪರೀಕ್ಷೆಯಲ್ಲಿ ತೇರ್ಗಡೆಗೊಂಡಿರಬೇಕು.

ಎಲ್ಲರಿಗೂ ಶಿಕ್ಷಣವೆಂಬ ಈ ಕಾರ್ಯಭಾರದಲ್ಲಿ ಮಂತ್ರಿಗಳಿಂದ ಹಿಡಿದು ಅಧಿಕಾರಿಗಳವರೆಗೆ, ಶಿಕ್ಷಣ ತಜ್ಞರು, ಶಿಕ್ಷಕರವರೆಗೆ ಭಾಗಿಗಳಾಗುವ ಜನರ ದೊಡ್ಡ ಪಟ್ಟಿಯೇ ಇದೆ. ಸ್ವಯಂಸೇವಾ ಸಂಸ್ಥೆಗಳ ಜನರೂ ಈಗ ಈ ಪಟ್ಟಿಗೆ ಸೇರ್ಪಡೆಗೊಂಡಿದ್ದಾರೆ. ಆದರೆ ಅತಿ ಪ್ರಮುಖ ಪಾತ್ರ ಶಿಕ್ಷಕರದ್ದು. ಚಿಂತನೆ, ಸಂಪನ್ಮೂಲ, ಸ್ವಾಯತ್ತತೆ ಮತ್ತು ಶಿಕ್ಷಕರಲ್ಲಿ ಗೌರವವನ್ನು ಖಾತರಿಪಡಿಸುವ ಪ್ರಾಥಮಿಕ ಜವಾಬ್ದಾರಿಯು ಸರಕಾರಿ ಶಿಕ್ಷಣ ಸಂರಚನೆಯದ್ದಾಗಿದೆ. ಇದು ನೀತಿ ನಿರೂಪಕರು, ಆಡಳಿತಾಧಿಕಾರಿಗಳು ಮತ್ತು ತರಬೇತಿ ಸಂಸ್ಥೆಗಳನ್ನು ಒಳಗೊಂಡಿದೆ. ಶಿಕ್ಷಕರ ಮತ್ತು ಶಿಕ್ಷಣದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಪ್ರಶ್ನೆ ಎತ್ತುವ ಮೊದಲು ನಾವು ಕೇಳಬೇಕಾದ ಪ್ರಶ್ನೆ ಒಂದಿದೆ: 'ಎಲ್ಲರಿಗೂ ಶಿಕ್ಷಣ'ದ ಕಾರ್ಯಸಾಧನೆಗೆ ಬೇಕಾದ ತಿಳುವಳಿಕೆ, ಸಂಪನ್ಮೂಲಗಳು ಮತ್ತು ಶಿಕ್ಷಕರಿಗೆ ಸಿಗಬೇಕಾದ ಗೌರವ ಸಮರ್ಪಕವಾಗಿದೆಯೇ? ಮತ್ತು ಸಾಕಷ್ಟಿದೆಯೇ? ನನ್ನ ಪ್ರಕಾರ, ಎಲ್ಲರಿಗೂ ಶಿಕ್ಷಣವೆಂಬ ಸನ್ನಿವೇಶದಲ್ಲಿ ಕೆಲಸ ಮಾಡಲು ಶಿಕ್ಷಕರಿಗೆ ಅವಶ್ಯವಿರುವ ಒಂದು ರೀತಿಯ ತಯಾರಿಯನ್ನು ಸರಕಾರ ಮತ್ತು ಸಮಾಜ ಎರಡೂ ಒದಗಿಸುತ್ತಿಲ್ಲ. ಇದಕ್ಕೆ ಇಚ್ಛಾಶಕ್ತಿಯ ಕೊರತೆಯೋ ಅಥವಾ ಸಂಪನ್ಮೂಲದ ಅಭಾವ ಕಾರಣವೋ ಎಂಬುದು ಸ್ಪಷ್ಟವಿಲ್ಲ. ಸಾಧಿಸಬೇಕಾದ ಕಾರ್ಯವು ಹೊಸತು ಮತ್ತು ಸವಾಲಿನದ್ದಾಗಿದ್ದು, ಇದನ್ನು ಸಾಧಿಸಲು ಬೇಕಾದ ತಯಾರಿಯು ಅಪೂರ್ಣವಾದದ್ದಾದರೆ, ಯಾರಾದರೂ ಹೇಗೆ ತಾನೇ ದೊಡ್ಡ ಪ್ರಮಾಣದ ಧನಾತ್ಮಕ ಫಲಿತಾಂಶವನ್ನು ನಿರೀಕ್ಷಿಸಲು ಸಾಧ್ಯ? 'ಎಲ್ಲರಿಗೂ ಶಿಕ್ಷಣ'ವನ್ನು ಒಳಗೊಳ್ಳುವಿಕೆಯ ಸಮಾಜದೆಡೆಗಿನ ಮೂಲಭೂತ ಹೆಜ್ಜೆಯೆಂದು ನಾವು ಪರಿಗಣಿಸಿದರೆ; ಆಗ ಅದರಿಂದ ಹೊಮ್ಮುವ ಕಾಳಜಿಗಳನ್ನು ಹೇಗೆ ನಾವು ನಮ್ಮ ಗುಣಾತ್ಮಕ ಶಿಕ್ಷಣದ ಕಾಳಜಿಗಳಿಗೆ – ಭಾಷೆ, ಗಣಿತ ಮತ್ತು ಇತರ ವಿಷಯಗಳ ಸಾಂಪ್ರದಾಯಿಕ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಮಿತಿಗೊಳಿಸಿಕೊಳ್ಳುವುದು ಸಾಧ್ಯ? ಶಿಕ್ಷಣದಿಂದ ಸಮಾಜಕ್ಕಿರುವ ನಿರೀಕ್ಷೆಗಳನ್ನು ನಾವು ಮರುವ್ಯಾಖ್ಯಾನ ಮಾಡಬೇಕು ಮತ್ತು ಪಠ್ಯಕ್ರಮ ಹಾಗೂ ಶಿಕ್ಷಕರ ಸಿದ್ಧತೆಯನ್ನು ಕೂಡಾ ಹೊಸ ದೃಷ್ಟಿಕೋನದಿಂದ ನೋಡಬೇಕು.

ಒಂದು ಕಡೆ, 'ಎಲ್ಲರಿಗೂ ಶಿಕ್ಷಣ' ಒಂದು ಉತ್ತಮ ಸಮಾಜದ ಹೃದಯ ಎಂಬುದನ್ನು ಒಂದು ಸಂಘಟಿತ ಅರ್ಥೈಸುವಿಕೆಯನ್ನಾಗಿ ಎಲ್ಲರ ಪ್ರಜ್ಞೆಯೊಳಗೆ ಮೂಡಿಸುವ ಜರೂರಿದೆ. ಅದು ಶಿಕ್ಷಣ ಎಂಬ ಸಾಮಾಜಿಕ ಯೋಜನೆಯಲ್ಲಿ ತೊಡಗಿರುವವರನ್ನು ಪ್ರೇರೇಪಿಸುವ ಅಂಶವಾಗುವ ಅಗತ್ಯವಿದೆ. ಇನ್ನೊಂದು ಕಡೆ, ಅಂತಹ ಪ್ರಜ್ಞೆ, ಈ ಯೋಜನೆಯ ಬೆಳಕು ಹಿಡಿದು ಮುನ್ನಡೆಯುವ ಶಿಕ್ಷಕರನ್ನು ಸ್ವಾಗತಿಸುವ, ಬೆಂಬಲಿಸುವ ಮತ್ತು ಗೌರವಿಸುವ ಅಗತ್ಯವೂ ಇದೆ.



**ಅನಂತ್ ಗಂಗೋಲ** ಅವರು ಹಲವು ವರ್ಷಗಳ ಕಾಲ ಮಧ್ಯಪ್ರದೇಶದ ನೀಲ್‌ಗರ್ ಗ್ರಾಮದಲ್ಲಿದ್ದುಕೊಂಡು, ಬುಡಕಟ್ಟು ಮಕ್ಕಳ ಪರ್ಯಾಯ ಶಿಕ್ಷಣ ವಿಷಯದಲ್ಲಿ ಕ್ರಿಯಾಶೀಲರಾಗಿದ್ದರು. ಆ ಬಳಿಕ ಅವರಿಗೆ ಬುಡಕಟ್ಟು ಜನರ ಬದುಕು ಮತ್ತು ಪರಿಸರದ ಬಗ್ಗೆ ಅಧ್ಯಯನ ನಡೆಸುವ ಅವಕಾಶ ಲಭಿಸಿತು. ಗಂಗೋಲ ಅವರು ಮುಂದೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ (District Coordinator for the District Primary Education Program-DPEP) ಜಿಲ್ಲಾ ಸಂಯೋಜಕರಾಗಿ ನಿಯುಕ್ತರಾದರು. ಕಳೆದ 15 ವರ್ಷಗಳಿಂದ ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ತೊಡಗಿಕೊಂಡಿದ್ದಾರೆ. ಜಿಲ್ಲೆ, ರಾಜ್ಯ ಮಟ್ಟದಲ್ಲಷ್ಟೇ ಅಲ್ಲದೆ ತಳಮಟ್ಟದಲ್ಲೂ ಕೆಲಸ ಮಾಡಿದ ಅನುಭವ ಅವರಿಗಿದೆ. ಅವರನ್ನು ಈ ಮಿಂಚಂಚೆಯ ಮೂಲಕ ಸಂಪರ್ಕಿಸಬಹುದು: anantgangola.ag@gmail.com

ಅನುವಾದ: **ದೇವಿಕ ಧರ್ಮಿಷ್ಟೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**